**ಚಾಸಾಃ 31 ಫ್ರಾಸಾಃ 20**

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ

## ಸಿ.ಸಿ ಸಂಖ್ಯೆ: 2/2022

| | |
|---|---|
| ಹೆಸರು | :ಪ್ರಭಾತ್ |
| ತಂದೆಯ ಹೆಸರು | :ರಾಧಾಕೃಷ್ಣ ಗೌಡ |
| ಪ್ರಾಯ | :33 ವರ್ಷ |
| ಉದ್ಯೋಗ | :ಕೆ.ಎಸ್.ಆರ್ .ಟಿ.ಸಿ ಚಾಲಕ |
| ವಾಸ | :ದೊಡ್ಡತೋಟ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 22.04.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ದಿಃ 27.10.2011 ರಂದು ಸುಳ್ಯ ಪೊಲೀಸ್ ಸರ್ಕಲ್ ಇನ್ಸ್ ಪೆಕ್ಟರ್ ರವರಾದ ಚಾಸಾ-50 ಪ್ರವೀಣ್ ನೀಲಮ್ಮನವರ್ ರವರು ನನಗೆ ಪೋನ್ ಮಾಡಿ ವಿಜಯ ಬ್ಯಾಂಕ್ ಮ್ಯಾನೇಜರ್ ರವರಾದ ಚಾಸಾ-30 ರವರು ಹಾಜರು ಪಡಿಸುವ ಚೆಕ್ ಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಪಂಚರಾಗಿ ಬರುವಂತೆ ತಿಳಿಸಿದ್ದು ಅದರಂತೆ ನಾನು ಬೆಳಿಗ್ಗೆ 10 ಗಂಟೆಗೆ ಪೊಲೀಸ್ ಠಾಣೆಗೆ ಹೋಗಿದ್ದು, ಆ ಸಮಯದಲ್ಲಿ ಚಾಸಾ-30, 32 ಕಿರಣ್ ರವರು ಮತ್ತು 50 ರವರು ಠಾಣೆಯಲ್ಲಿ ಹಾಜರಿದ್ದು, ಆ ಸಮಯದಲ್ಲಿ ಚಾಸಾ-30 ರವರು 16 ಚೆಕ್ ಗಳನ್ನು ಹಾಜರು ಪಡಿಸಿದ್ದು, ಅದನ್ನು ಚಾಸಾ-50 ರವರು ವಶಪಡಿಸಿಕೊಂಡು ಈ ಬಗ್ಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಬೆಳಿಗ್ಗೆ 10 ರಿಂದ 11 ಗಂಟೆಯವರೆಗೆ ಪಂಚನಾಮೆಯನ್ನು

ತಯಾರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ–6(ಬಿ) ಎಂದು ಗುರುತಿಸಲಾಯಿತು. ಚಾಸಾ–30 ರವರು ಹಾಜರು ಪಡಿಸಿದ 16 ಚೆಕ್ಕುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಚೆಕ್ ಗಳನ್ನು ಈಗಾಗಲೇ ಮೂಲ ಪ್ರ.ಸ.348/2015ರಲ್ಲಿ ನಿಪಿ–67 ರಿಂದ 82 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

ನಾನು ಆ ಸಮಯದಲ್ಲಿ ಸುಳ್ಯ ಪೊಲೀಸ್ ಠಾಣೆಯಲ್ಲಿ ಹೋಂ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಸದರಿ ಚೆಕ್ ಗಳ ಮೇಲೆ 9 ರಿಂದ 24 ಎಂದು ಬರೆದಿರುತ್ತಾರೆ. ಸದರಿ ಚೆಕ್ಕುಗಳು ಯಾವ ಬ್ಯಾಂಕಿನದು ಎಂದು ಈಗ ನನಗೆ ನೆನಪಿಲ್ಲ. ನಿಪಿ–6ನ್ನು ಚಾಸಾ–50 ರವರೇ ಟೈಪ್ ಮಾಡಿರುತ್ತಾರೆ. ನಾನು ಹೋಂ ಗಾರ್ಡ್ ಆಗಿದ್ದ ಕಾರಣಕ್ಕೆ ಚಾಸಾ–50ರವರು ನನ್ನ ಹಿರಿಯ ಅಧಿಕಾರಿಯಾಗಿದ್ದು, ಅವರ ದಾಕ್ಷಿಣ್ಯಕ್ಕೆ ಒಳಗಾಗಿ ನನ್ನ ಮುಂದೆ ಯಾವುದೇ ಚೆಕ್ ಗಳನ್ನು ಅಮಾನತು ಪಡಿಸಿಕೊಳ್ಳದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ